ಸೂರ್ಯೋದಯ: 6: 12 ಸೂರ್ಯಾಸ್ತ : 7:01 ಚಂದ್ರೋದಯ: ಬೆ. 5:49 ಚಂದ್ರಾಸ್ತ: ರಾ. 7:11 | ಮಂಗಳವಾರದ ಉಷ್ಣಾಂಶ : ಗರಿಷ್ಠ 31° ಕನಿಷ್ಠ 24°

ಬುಧವಾರದ ಉಷ್ಣಾಂಶ 31° ಗರಿಷ್ಠ 24° ಕನಿಷ್ಠ | ಗುರುವಾರ 29° : 24° | ಶುಕ್ರವಾರ 29° : 24° | ಶನಿವಾರ 29° : 24°

ಬುಧವಾರ • ಜುಲೈ 15, 2026

ಪ್ರಜಾವಾಣಿ

ಹವಾಮಾನ ಮುನ್ಸೂಚನೆ: ಜಿಲ್ಲೆಯಾದ್ಯಂತ ಮೋಡ ಕವಿದ ವಾತಾವರಣ. ಸಾಧಾರಣ ಮಳೆ ಸಾಧ್ಯತೆ

ಕ್ಷಣಕ್ಷಣದ ಸುದ್ದಿಗಾಗಿ prajavani.net ನೋಡಿ

‘ಬರ’ದ ಭಾರ; ಕೀಟದ ಬರೆ

ತೋಟದಲ್ಲಿ ಉದುರುತ್ತಿರುವ ಎಳೆ ಅಡಿಕೆ ಕಾಯಿ, ಬೆಳೆಗಾರರಲ್ಲಿ ಆತಂಕ

• ಸಂಧ್ಯಾ ಹೆಗಡೆ

ಮಂಗಳೂರು: ಕಳೆದ ವರ್ಷ ಅಧಿಕ ಮಳೆಯಿಂದ ಅಡಿಕೆ ಬೆಳೆಗೆ ಕೊಳೆರೋಗ ತಗುಲಿ ಬೆಳೆ ನಷ್ಟವಾಗಿದ್ದರೆ, ಈ ಬಾರಿ ಬರದ ಜೊತೆಗೆ ಪೆಂಟಾಟೊಮಿಡ್ (ಪೆಂತಿ) ಕೀಟದ ಬರೆಯಿಂದ ಬೆಳೆಗಾರರು ಕಂಗಾಲಾಗಿದ್ದಾರೆ. ಹವಾಮಾನ ವೈಪರೀತ್ಯವೂ ಅಡಿಕೆ ಕಾಯಿ ಉದುರಲು ಕಾರಣವಾಗಿರಬಹುದು ಎಂಬುದು ಬೆಳೆಗಾರರ ಲೆಕ್ಕಾಚಾರ.

ನಿತ್ಯವೂ ತೋಟದಲ್ಲಿ ಹಾಸಿದಂತೆ ಬೀಳುವ ಎಳೆ ಅಡಿಕೆ ಕಾಯಿಗಳು ಉದುರಿ ಬೀಳುತ್ತಿವೆ. ಇನ್ನೂ ಬಲಿಯದ ಈ ಎಳೆ ಕಾಯಿ ಯಾವ ಪ್ರಯೋಜನಕ್ಕೂ ಬರುವುದಿಲ್ಲ. ಇಷ್ಟರೊಳಗೆ ಶೇ 30ಕ್ಕೂ ಅಧಿಕ ಪ್ರಮಾಣದಲ್ಲಿ ಬೆಳೆ ನಷ್ಟವಾಗಿದೆ ಎನ್ನುತ್ತಾರೆ ಬೆಳೆಗಾರರು. ಮುಂಗಾರು ಪೂರ್ವದಲ್ಲಿ ಬೋರ್ಡೊ ದ್ರಾವಣ ಸಿಂಪಡಣೆ ಮಾಡಿರುವ ಬೆಳೆಗಾರರು, ಈಗ ಎರಡನೇ ಸುತ್ತಿನ ಬೋರ್ಡೊ ಸಿಂಪಡಣೆ ಪ್ರಾರಂಭಿಸಿದ್ದಾರೆ.

‘ಜೂನ್ ತಿಂಗಳ ಆರಂಭದಿಂದಲೇ ಅಡಿಕೆ ಕಾಯಿ ಉದುರಲು ಶುರುವಾಗಿದೆ. ಇದಕ್ಕೆ ಒಮ್ಮೆ ಮಳೆ, ಒಮ್ಮೆ ಬಿಸಿಲಿನ ವಾತಾವರಣ ಕಾರಣವಾಗಿರಬಹುದೇ ಎಂಬುದು ಗೊತ್ತಿಲ್ಲ. ಈ ಬಾರಿ ಇಳುವರಿ ಕಡಿಮೆ ಇದೆ. ಇದ್ದ ಬೆಳೆಯನ್ನೂ ಪೂರ್ಣ ಪ್ರಮಾಣದಲ್ಲಿ ಉಳಿಸಿಕೊಳ್ಳಲು ಆಗುತ್ತಿಲ್ಲ. ಮಾರ್ಚ್– ಏಪ್ರಿಲ್ ವೇಳೆಗೆ ಬಿಟ್ಟಿರುವ ಹಿಂಗಾರದ ಅಡಿಕೆಗಳು ಹೆಚ್ಚು ಉದುರುತ್ತಿವೆ. ಸಣ್ಣ ಕಾಯಿ ಹಾಗೂ ಗಟ್ಟಿಯಾಗಿರುವ ದೊಡ್ಡ ಕಾಯಿ ಮರದಲ್ಲಿ ನಿಂತಿದೆ’ ಎನ್ನುತ್ತಾರೆ ಅಡಿಕೆ ಬೆಳೆಗಾರ ಕೇಶವ ಶೆಟ್ಟಿ ವಗ್ಗ.

ಅಡಿಕೆಗೆ ಉತ್ತಮ ಬೆಲೆ ದೊರೆತರೂ, ಕೃಷಿ ಕಾರ್ಮಿಕರ ಕೂಲಿ, ನಿರ್ವಹಣೆ ವೆಚ್ಚ ವಿಪರೀತ ಹೆಚ್ಚಳವಾಗಿದೆ. ಇದರಿಂದಾಗಿ ಬೆಳೆಗಾರರಿಗೆ ಖರ್ಚು ಸರಿದೂಗಿಸಿಕೊಳ್ಳುವುದೇ ಸವಾಲಾಗಿದೆ. ಕಳೆದ ವರ್ಷವಂತೂ ಕೊಳೆರೋಗದಿಂದ ಆದಾಯಕ್ಕಿಂತ ಖರ್ಚು ಅಧಿಕವಾಯಿತು ಎನ್ನುತ್ತಾರೆ ಅವರು.

‘ಮಾರ್ಚ್, ಏಪ್ರಿಲ್ ವೇಳೆಗೆ ತೋಟದಲ್ಲಿ ಕೀಟನಾಶಕ ಸಿಂಪಡಣೆ ಮಾಡಿದ ಕಾರಣಕ್ಕೆ ಇರಬಹುದಾ ಗೊತ್ತಿಲ್ಲ ನಮ್ಮ ತೋಟದಲ್ಲಿ ಅಡಿಕೆ ಉದುರುವಿಕೆ ಕಡಿಮೆ ಇದೆ. ಎಲೆಚುಕ್ಕಿ ರೋಗ ಹಾಗೂ ಪೆಂತಿ ಕೀಟದ ಬಾಧೆಯೂ ನಿಯಂತ್ರಣದಲ್ಲಿದೆ’ ಎನ್ನುತ್ತಾರೆ ಸುಳ್ಯ ತಾಲ್ಲೂಕಿನ ಬೆಳೆಗಾರ ಜಯರಾಮ ಮುಂಡೋಳಿಮೂಲೆ.

‘ಬೇಸಿಗೆಯಲ್ಲಿ ಪ್ಯಾಕೇಜ್ ಆಫ್ ಪ್ರಾಕ್ಟೀಸ್ ಅನುಸರಿಸಿದವರಿಗೆ ಬೆಳೆ ನಷ್ಟ ಅಷ್ಟಾಗಿ ಆಗಿಲ್ಲ. ಏಪ್ರಿಲ್, ಮೇ ತಿಂಗಳಲ್ಲಿ ಅಡಿಕೆ ಬೆಳವಣಿಗೆ ಹಂತದಲ್ಲಿರುವ ಪೆಂತಿ ಕೀಟ ಒಳಸೇರಿ ಬೆಳೆಯನ್ನು ಹಾಳು ಮಾಡುತ್ತದೆ. ಈ ಬಾರಿ ಬಿಸಿಲು–ಮಳೆಯಾಟದಲ್ಲಿ ಈ ಕೀಟಗಳ ಸಂಖ್ಯೆ ವೃದ್ಧಿಸಿರಲೂಬಹುದು ಎಂದು ಇನ್ನೊಬ್ಬ ಬೆಳೆಗಾರ ಹೇಳಿದರು.

‘ಹಸಿರು ಅಡಿಕೆ ಉದುರಲು ಬೇರೆ ಬೇರೆ ಕಾರಣಗಳಿರುತ್ತವೆ. ಮಳೆ ಕೊರತೆ ಅಡಿಕೆ ಬೆಳೆಯ ಮೇಲೆ ವ್ಯತಿರಿಕ್ತ ಪರಿಣಾಮ ಉಂಟುಮಾಡಿರಬಹುದು. ಕೆಲವೆಡೆ, ಪೆಂಟಾಟೊಮಿಡ್ ಕೀಟದ ಬಾಧೆ ಅಥವಾ ಪೆರಿಯಾಂತ್ ಮೈಟ್ ಬಾಧೆಯಿಂದ ಅಡಿಕೆ ಉದುರಿರಬಹುದು. ಕೊಲೆಟೊಟ್ರಿಕಮ್ ಶಿಲೀಂಧ್ರದಿಂದ ಹಿಂಗಾರ ಒಣಗುವ ರೋಗ ಇದ್ದರೆ ಅಥವಾ ಎಲೆಚುಕ್ಕಿ ರೋಗ ತೀವ್ರವಾಗಿರುವ ತೋಟದಲ್ಲಿ, ಹಸಿರು ಅಡಿಕೆ ಕಾಯಿಯ ಮೇಲೂ ಚುಕ್ಕೆ ಕಾಣಿಸಿಕೊಂಡು ಎಳೆ ಅಡಿಕೆ ಕಾಯಿ ಬೀಳುವುದು ಕಂಡು ಬರುತ್ತಿದೆ. ಕೀಟ ಅಥವಾ ಶಿಲೀಂಧ್ರ ಬಾಧೆಯಿಂದ ಬೀಳುತ್ತಿದ್ದರೆ, ಸೂಕ್ತ ನಿರ್ವಹಣಾ ಕ್ರಮಗಳನ್ನು ಅನುಸರಿಸಬೇಕು’ ಎನ್ನುತ್ತಾರೆ ನಿವೃತ್ತ ವಿಜ್ಞಾನಿ ವಿನಾಯಕ ಹೆಗಡೆ.

ತೋಟದಲ್ಲಿ ಉದುರಿರುವ ಎಳೆ ಅಡಿಕೆ

‘ಹೆಚ್ಚುತ್ತಿದೆ ಕೀಟಗಳ ಕಾಟ’

ಅಡಿಕೆ ತೋಟಗಳಲ್ಲಿ ಪೆಂತಿ ಕೀಟಗಳ ಹಾವಳಿಯಿಂದ ಎಳೆ ಅಡಿಕೆ ಕಾಯಿಗಳು ಉದುರುತ್ತಿದ್ದು, ಅಡಿಕೆ ಬೆಳೆಗಾರರು ಶೇ 20ರಿಂದ 30ರಷ್ಟು ಇಳುವರಿ ನಷ್ಟ ಅನುಭವಿಸುವಂತಾಗಿದೆ. ಈ ಕೀಟಗಳ ಕಾಟವು ಹಿಂದೆ ಮೇ ತಿಂಗಳಿನಿಂದ ಜುಲೈವರೆಗೆ ಇದ್ದರೆ, ಹವಾಮಾನ ವೈಪರೀತ್ಯದಿಂದಾಗಿ ಇತ್ತೀಚಿನ ವರ್ಷಗಳಲ್ಲಿ ಮಾರ್ಚ್‌ನಿಂದ ಅಕ್ಟೋಬರ್‌ವರೆಗೂ ವಿಸ್ತರಿಸುತ್ತಿದೆ. ಹೆಚ್ಚಿನ ತಾಪಮಾನ ಹಾಗೂ ಆರ್ದ್ರತೆ ಇರುವ ಸಮಯದಲ್ಲಿ ಈ ಸಮಸ್ಯೆ ತೀವ್ರವಾಗಿ ಬಾಧಿಸುತ್ತದೆ ಎನ್ನುತ್ತಾರೆ ಅಡಿಕೆ ಬೆಳೆಗಾರ ಅರುಣ್ ಕುಮಾರ್ ಕಾಂಚೋಡು.

‘ಪೋಷಕಾಂಶ ನಿರ್ವಹಣೆ ಮುಖ್ಯ’

ಸಾಮಾನ್ಯವಾಗಿ ಪೆಂತಿ ಕೀಟದ ಬಾಧೆ ಜುಲೈ ಮಧ್ಯ ಭಾಗದವರೆಗೆ ಇರುತ್ತದೆ. ಅಡಿಕೆ ಗಟ್ಟಿಯಾಗಿ ಕಾಯಿಯೊಳಗೆ ರಸ ಕಡಿಮೆಯಾದ ನಂತರ ಈ ಕೀಟಗಳ ಸಂಖ್ಯೆ ಇಳಿಮುಖವಾಗುತ್ತದೆ. ಈ ವರ್ಷ ಕೆಲವು ತೋಟಗಳಲ್ಲಿ ಗಟ್ಟಿ ಅಡಿಕೆಯೂ ಬೀಳುತ್ತಿದ್ದು, ಬೋರಾನ್ ಕೊರತೆಯ ಕಾರಣವೂ ಇರಬಹುದು. ರಸ ಹೀರುವ ಕೀಟಗಳು ತೊಟ್ಟಿನ ಭಾಗದಲ್ಲಿ ರಸ ಹೀರಿದರೆ, ಬೆಳವಣಿಗೆಯಲ್ಲಿ ವ್ಯತ್ಯಾಸ ಆಗಿ ಅಡಿಕೆ ಉದುರಬಹುದು. ಹವಾಮಾನ ವೈಪರೀತ್ಯದಿಂದ ಅಡಿಕೆ ಉದುರುವ ಸಾಧ್ಯತೆ ಕಡಿಮೆ ಇದೆ ಎನ್ನುತ್ತಾರೆ ಸಿಪಿಸಿಆರ್‌ಐ ವಿಟ್ಲದ ವಿಜ್ಞಾನಿ ಭವಿಷ್ಯ.

ಧರ್ಮಸ್ಥಳ: ಪುರಾಣ ಪ್ರವಚನ ನಾಳೆಯಿಂದ

ಪ್ರಜಾವಾಣಿ ವಾರ್ತೆ

ಉಜಿರೆ: ಧರ್ಮಸ್ಥಳದ ದೇವಸ್ಥಾನದ ಎದುರು ಇರುವ ಪ್ರವಚನ ಮಂಟಪದಲ್ಲಿ ಜುಲೈ 16 ರಿಂದ ಸೆಪ್ಟೆಂಬರ್ 17ರವರೆಗೆ 55ನೇ ವರ್ಷದ ಪುರಾಣ ವಾಚನ-ಪ್ರವಚನ ಹಮ್ಮಿಕೊಳ್ಳಲಾಗಿದ್ದು, 16ರಂದು ಸಂಜೆ 5 ಗಂಟೆಗೆ ಕನ್ಯಾಡಿ ರಾಮಕ್ಷೇತ್ರ ಸಂಸ್ಥಾನದ ಪೀಠಾಧಿಪತಿ ಬ್ರಹ್ಮಾನಂದ ಸರಸ್ವತಿ ಸ್ವಾಮೀಜಿ ಕಾರ್ಯಕ್ರಮ ಉದ್ಘಾಟಿಸುವರು. ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆ ಅಧ್ಯಕ್ಷತೆ ವಹಿಸುವರು ಎಂದು ಪುರಾಣ ವಾಚನ-ಪ್ರವಚನ ಸಮಿತಿಯ ಸಂಚಾಲಕ ಎ.ವಿ.ಶೆಟ್ಟಿ ತಿಳಿಸಿದ್ದಾರೆ.

ಪ್ರತಿದಿನ ಸಂಜೆ ಗಂಟೆ 6.30 ರಿಂದ 8 ಗಂಟೆವರೆಗೆ ಪುರಾಣ ವಾಚನ-ಪ್ರವಚನ ನಡೆಯಲಿದ್ದು, ಖ್ಯಾತ ವಿದ್ವಾಂಸರು ಹಾಗೂ ಕಲಾವಿದರಿಂದ ಕುಮಾರವಾಲ್ಮೀಕಿ ವಿರಚಿತ ‘ತೊರವೆ ರಾಮಾಯಣ’ದ ವಾಚನ-ಪ್ರವಚನ ನಡೆಸಿಕೊಡಲಿದ್ದಾರೆ. ಶನಿವಾರ ಮತ್ತು ಭಾನುವಾರ ವಿವಿಧ ಕಾವ್ಯಗಳ ಆಯ್ದ ಭಾಗಗಳನ್ನು ವಾಚನ-ಪ್ರವಚನಕ್ಕೆ ಬಳಸಲಾಗುವುದು. 16ರಂದು ಮತ್ತು 17ರಂದು ಗಣಪತಿ ಭಟ್ ಪದ್ಯಾಣ ವಾಚನಕಾರರಾಗಿಯೂ, ಹವ್ಯಾಸಿ ಯಕ್ಷಗಾನ ಕಲಾವಿದ ಉಜಿರೆ ಅಶೋಕ ಭಟ್ ಪ್ರವಚನಕಾರರಾಗಿಯೂ ಭಾಗವಹಿಸುವರು ಎಂದು ಅವರು ತಿಳಿಸಿದ್ದಾರೆ.

ಕೈತೋಟ ತರಬೇತಿ

ಮಂಗಳೂರು: ತೋಟಗಾರಿಕೆ ಇಲಾಖೆ, ಸಿರಿ ತೋಟಗಾರಿಕೆ ಸಂಘದಿಂದ ಇಲ್ಲಿಯ ಬೆಂದೂರಿನಲ್ಲಿರುವ ತೋಟಗಾರಿಕೆ ಜಂಟಿ ನಿರ್ದೇಶಕರ ಕಚೇರಿಯಲ್ಲಿ ಕೈತೋಟ ತರಬೇತಿ ಕಾರ್ಯಕ್ರಮವನ್ನು ಜುಲೈ 28 ರಂದು ಬೆಳಿಗ್ಗೆ 9.30 ರಿಂದ ಮಧ್ಯಾಹ್ನ 1 ರವರೆಗೆ ಹಮ್ಮಿಕೊಳ್ಳಲಾಗಿದೆ. ತರಬೇತಿ ವೇಳೆ ಪಾಟಿಂಗ್, ರೀಪಾಟಿಂಗ್, ಕಸಿ ಕಟ್ಟುವುದು (ಗ್ರಾಫ್ಟಿಂಗ್, ಬಡ್ಡಿಂಗ್, ಲೇಯರಿಂಗ್), ಸಾವಯವ ಗೊಬ್ಬರ ತಯಾರಿ, ತಾರಸಿ ಕೃಷಿಯ ಕುರಿತು ತರಬೇತಿ ನೀಡ ಲಾಗುತ್ತದೆ. ಆಸಕ್ತರು ₹100 ಶುಲ್ಕ ಪಾವತಿಸಿ ಹೆಸರು ನೋಂದಾಯಿಸಬೇಕು. ಮಾಹಿತಿಗೆ ಮೊ. 9845523944

ಅಂಗನವಾಡಿ ಕಾರ್ಯಕರ್ತೆ, ಸಹಾಯಕಿಯರ ಹುದ್ದೆಗಳಿಗೆ ಅರ್ಜಿ

ಮಂಗಳೂರು: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಶಿಶು ಅಭಿವೃದ್ಧಿ ಯೋಜನೆ ಮಂಗಳೂರು ನಗರ ಮತ್ತು ಗ್ರಾಮಾಂತರ ವ್ಯಾಪ್ತಿಯಲ್ಲಿ ಖಾಲಿ ಇರುವ ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರ ಹುದ್ದೆಗೆ ಅರ್ಜಿ ಆಹ್ವಾನಿಸಲಾಗಿದೆ.

ಮಂಗಳೂರು ನಗರ ವ್ಯಾಪ್ತಿಯ 7 ಅಂಗನವಾಡಿ ಕಾರ್ಯಕರ್ತೆ ಹುದ್ದೆಗೆ ಹಾಗೂ 32 ಅಂಗನವಾಡಿ ಸಹಾಯಕಿಯರ ಹುದ್ದೆ, ಮಂಗಳೂರು ಗ್ರಾಮಾಂತರ ವ್ಯಾಪ್ತಿಯ 4 ಅಂಗನವಾಡಿ ಕಾರ್ಯಕರ್ತೆ ಹಾಗೂ 39 ಅಂಗನವಾಡಿ ಸಹಾಯಕಿಯರ ಹುದ್ದೆಗಳನ್ನು ಭರ್ತಿ ಮಾಡಲು ಆಫ್‌ಲೈನ್ ಮೂಲಕ ಅರ್ಹ ಮಹಿಳಾ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಮಂಗಳೂರು ತಾಲ್ಲೂಕು ವ್ಯಾಪ್ತಿಯಲ್ಲಿ 14 ಸಹಾಯಕಿಯರು, ಮೂಲ್ಕಿ ತಾಲ್ಲೂಕು ವ್ಯಾಪ್ತಿಯಲ್ಲಿ 3 ಸಹಾಯಕಿಯರು, ಮೂಡುಬಿದಿರೆ ತಾಲ್ಲೂಕು ವ್ಯಾಪ್ತಿಯಲ್ಲಿ 4 ಸಹಾಯಕಿಯರು ಹಾಗೂ ಉಳ್ಳಾಲ ತಾಲ್ಲೂಕು ವ್ಯಾಪ್ತಿಯಲ್ಲಿ 4 ಕಾರ್ಯಕರ್ತೆಯರು ಮತ್ತು 18 ಸಹಾಯಕರ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ.

ಆಗಸ್ಟ್ 10 ರೊಳಗಾಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಕಚೇರಿಗೆ ಅರ್ಜಿ ಸಲ್ಲಿಸಬೇಕು. ಮಾಹಿತಿಗೆ ಮಂಗಳೂರು ನಗರ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಕಚೇರಿ ದೂ.0824-2959809, ಗ್ರಾಮಾಂತರ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಕಚೇರಿ 0824-2263199 ಸಂಪರ್ಕಿಸಬಹುದು

ಸುಬ್ರಹ್ಮಣ್ಯ ಸಮೀಪದ ಏನೆಕಲ್ಲು ಗ್ರಾಮದಲ್ಲಿ ಒಕ್ಕಲಿಗ ಗೌಡರ ಮಹಾ ಅಭಿಯಾನ ಈಚೆಗೆ ನಡೆಯಿತು

ಏನೆಕಲ್ಲು: ಒಕ್ಕಲಿಗ ಗೌಡರ ಅಭಿಯಾನ

ಪ್ರಜಾವಾಣಿ ವಾರ್ತೆ

ಸುಬ್ರಹ್ಮಣ್ಯ: ಕಡಬ ತಾಲ್ಲೂಕಿನ ಒಕ್ಕಲಿಗ ಗೌಡ ಸೇವಾ ಸಂಘದ ಸುಬ್ರಹ್ಮಣ್ಯ ವಲಯದ ವತಿಯಿಂದ ಏನೆಕಲ್ಲು ಗ್ರಾಮದಲ್ಲಿ ಒಕ್ಕಲಿಗ ಗೌಡರ ಮಹಾ ಅಭಿಯಾನ ಈಚೆಗೆ ನಡೆಯಿತು.

ಕಡಬ ತಾಲ್ಲೂಕಿನ ಹೊಸಮಠದಲ್ಲಿ ನೂತನವಾಗಿ ನಿರ್ಮಾಣಗೊಳ್ಳುತ್ತಿರುವ ಸಮುದಾಯ ಭವನದ ಮಾಹಿತಿ ಆರ್ಥಿಕ ಕ್ರೂಢೀಕರಣದ ಬಗ್ಗೆ ವಿವರಿಸಲಾಯಿತು.

ಅಭಿಯಾನದಲ್ಲಿ ಕಡಬ ತಾಲೂಕು ಒಕ್ಕಲಿಗ ಗೌಡ ಸೇವಾ ಸಂಘದ ಅಧ್ಯಕ್ಷ ಸುರೇಶ ಬೈಲು, ಉಪಾಧ್ಯಕ್ಷ ತಮ್ಮಯ್ಯ ಗೌಡ ಹಿರಿಯರಾದ ತಿಮ್ಮಪ್ಪ ಗೌಡ ಕುಂಡಡ್ಕ, ಆಶಾ ತಿಮ್ಮಪ್ಪ ಗೌಡ, ಸೂರಪ್ಪ ಗೌಡ ಬಲಾಡಿ, ರಾಮಯ್ಯಗೌಡ ಮಾದನಮನೆ, ಕಡಬ ತಾಲೂಕು ಸಂಘಟನಾ ಕಾರ್ಯದರ್ಶಿ ಶಿವರಾಮ ಏನೆಕಲ್, ಎನೆಕಲ್ಲು ಗ್ರಾಮ ಸಮಿತಿಯ ಅಧ್ಯಕ್ಷ ಶಿವಪ್ರಸಾದ ಮಾದನಮನೆ, ಕಾರ್ಯದರ್ಶಿ ಪ್ರಶಾಂತ್ ಕೋಡಿಬೈಲು, ಸುಬ್ರಹ್ಮಣ್ಯ ವಲಯ ಅಧ್ಯಕ್ಷ ಉಮೇಶ ಹೊಸೊಳಿಕೆ, ಉಪಾಧ್ಯಕ್ಷ ಬಾಲಕೃಷ್ಣ ಕಣಕಲ್, ಐನಿಕಿದು ಗ್ರಾಮ ಸಮಿತಿ ಅಧ್ಯಕ್ಷ ದಾಮೋದರ ಗೌಡ ಕಟ್ಟಿಮನೆ, ಕಾರ್ಯದರ್ಶಿ ಭವಾನಿ ಶಂಕರ ಪೈಲಾಜೆ, ಸುಬ್ರಹ್ಮಣ್ಯ ಗ್ರಾಮ ಸಮಿತಿ ಕಾರ್ಯದರ್ಶಿ ವಿಶ್ವನಾಥ ನಡುತೋಟ, ಬಳ್ಪ ಗ್ರಾಮ ಸಮಿತಿ ಅಧ್ಯಕ್ಷ ಹರೀಶ ಕಲಂಗುಡಿ, ಸೂರಪ್ಪ ಗೌಡ ಬಾಲಾಡಿ, ರಾಮಯ್ಯ ಗೌಡ ಮಾದನಮನೆ, ತಾಲ್ಲೂಕಿನ 42 ಗ್ರಾಮಗಳ ಪ್ರಮುಖರು ಹಾಗೂ ಸ್ವಯಂಸೇವಕರು ಹಾಜರಿದ್ದರು.

ಶಿಕ್ಷಕರ ಸಂಘದಿಂದ ಶಾಸಕರಿಗೆ ಮನವಿ

ಪ್ರಜಾವಾಣಿ ವಾರ್ತೆ

ಪುತ್ತೂರು: ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿಗೆ ನೂತನ ಇಲಾಖಾ ವಾಹನ ಒದಗಿಸುವುದು, ಶಿಥಿಲಾವಸ್ಥೆಯ ಗುರುಭವನದ ಕಟ್ಟಡದ ಸ್ಥಳದಲ್ಲಿ ಸುಸಜ್ಜಿತ ಹೊಸ ಗುರುಭವನ ನಿರ್ಮಿಸಲು ಅನುದಾನ ಒದಗಿಸುವಂತೆ ಆಗ್ರಹಿಸಿ ಕ್ಷೇತ್ರ ಶಿಕ್ಷಣಾಧಿಕಾರಿ ಸುರೇಶ್ ಡಿ ಹಾಗೂ ಶಿಕ್ಷಕ ಪ್ರಮುಖರು ಶಾಸಕ ಅಶೋಕ್‌ಕುಮಾರ್ ರೈ ಅವರಿಗೆ ಮನವಿ ಸಲ್ಲಿಸಿದರು.

ಪ್ರಭಾರ ಕ್ಷೇತ್ರ ಶಿಕ್ಷಣಾಧಿಕಾರಿ ವಿಷ್ಣುಪ್ರಸಾದ್, ದೈಹಿಕ ಶಿಕ್ಷಣ ಪರಿವೀಕ್ಷಕಿ ಸಿಲ್ವಿಯ ಎ.ಆರ್ ಕ್ಯಾಸ್ಟೆಲಿನೊ, ಕ್ಷೇತ್ರ ಸಂಪನ್ಮೂಲ ಕೇಂದ್ರದ ಸಮನ್ವಯಾಧಿಕಾರಿ ನವೀನ್ ಸ್ಟೀಫನ್ ವೇಗಸ್, ತಾಲ್ಲೂಕಿನ ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ಅಧ್ಯಕ್ಷ ಅಬ್ರಹಾಂ ಎಸ್.ಎ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ರಾಮಕೃಷ್ಣ ಮಲ್ಲಾರ, ಶಾಲಾ ಶಿಕ್ಷಣ ಇಲಾಖೆ ನೌಕರ ಸಂಘದ ಅಧ್ಯಕ್ಷ ಮಾಮಚ್ಚನ್ ಎಂ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಕಾರ್ಯದರ್ಶಿ ಅಶ್ರಫ್, ದೈಹಿಕ ಶಿಕ್ಷಣ ಶಿಕ್ಷಕರ ಸಂಘದ ಪ್ರಧಾನ ಕಾರ್ಯದರ್ಶಿ ಅಬ್ರಹಾಂ ಮತ್ತಿತರರು ಮನವಿ ಸಲ್ಲಿಸಿ ಶೈಕ್ಷಣಿಕ ಬೇಡಿಕೆಗಳಿಗೆ ಸ್ಪಂದಿಸುವಂತೆ ಮನವಿ ಮಾಡಿದರು.

ಮಂಗಳೂರು ಮಹಾನಗರಪಾಲಿಕೆ

ಮಹಾನಗರ ಪಾಲಿಕೆ ಕಾರ್ಯಾಲಯ ಮಂಗಳೂರು

ಸಂಖ್ಯೆ: ಮನಪಾ/ಇ.ಇ/ವಿದ್ಯುತ್/EOI/2026–27 ದಿನಾಂಕ: 14.07.2026

ದರಸೂಚಿ ಪ್ರಕಟಣೆ (EOI)

ವಿಷಯ: ಮೊಹರು ಮಾಡಲ್ಪಟ್ಟ ಲಕೋಟೆಯಲ್ಲಿ ಈ ಕೆಳಗೆ ನಮೂದಿಸಿದ ಕೆಲಸ ಕಾರ್ಯಗಳಿಗೆ ತಮ್ಮ ಆಸಕ್ತಿ ವ್ಯಕ್ತಪಡಿಸುವಿಕೆಯ ಪತ್ರವನ್ನು ದಿನಾಂಕ: 24.07.2026 ಸಾಯಂಕಾಲ ಗಂಟೆ 4.00 ಒಳಗೆ ಸಲ್ಲಿಸುವಂತೆ ಕೋರಿದೆ.

SL NO.	PARTICULARS	Unit	RATE PER MONTH
1	Name of work: Comprehensive Annual maintenance contract for Truck mounted hydraulic boom lift (sky lift) under Mangaluru City Corporation Limits.	01 Job	

ವಿ.ಸೂ. ದರಸೂಚಿ ಪತ್ರವನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಯಾ ಪುರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ ಮತ್ತು ಇತರೇ ಶರ್ತಗಳು ಮಹಾನಗರಪಾಲಿಕೆಯ ನೀತಿ ನಿಯಮಕ್ಕೆ ಒಳಪಟ್ಟಿದೆ. ಹೆಚ್ಚಿನ ವಿವರಣೆ ಮತ್ತು ತಾಂತ್ರೀಕ ವಿಶ್ಲೇಷಣೆಗೆ ಸಂಭಂದಪಟ್ಟ ಮಾಹಿತಿಯನ್ನು ಕಚೇರಿ ಸಮಯದಲ್ಲಿ ಕಾರ್ಯಪಾಲಕ ಅಭಿಯಂತರರ ಕಚೇರಿಯಲ್ಲಿ ಕೇಳಿ ಪಡೆಯಬಹುದಾಗಿದೆ.

ಸಹಿ/–ಕಾರ್ಯಪಾಲಕ ಅಭಿಯಂತರರು
ಮಹಾನಗರ ಪಾಲಿಕೆ ಮಂಗಳೂರು.

DIPR/DK/KSMCA/512/26-27 dt: 14.07.2026

सेन्ट्रल बैंक ऑफ इंडिया
Central Bank of India

1911 से आपके लिए ''केंद्रित'' "CENTRAL" TO YOU SINCE 1911

प्रादेशिक कचेरी : हुब्बल्ली

स्थिरास्तिय मारावाटक्के मारावाटद सूचने

स्थिरास्तिगळ इ–हराजु मारावाट सूचने. भद्रतेय अडियल्लि मत्तु हणकासु आस्तिगळ पुनर्निमान मत्तु भद्रता बड्डि कायदे 2002(2002 र प्रकार 6 वरेगे ओदि) 2002 र सुरक्षता आसक्ति(जारि) नियमगळ अडियल्लि

हणकासु स्वत्तुगळ भद्रते, पुनर् निर्माण हागू भद्रता हितासक्ति कायदे, 2002 (SARFAESI ACT) अडि हागू भद्रता आसक्ति (जारि) नियमु 2002र नियमु 8(6)र अडि इ–हराजु मूलक करेयलाद स्थिरास्तिगळ मारावाटद नोटिस्.

सार्वजनिकरिगे सामूहिकवागि हागू सालगारारिगे हागू जामीनुदारारिगे प्रत्येकवागि नोटिस् जारि माडिद्दु, ई मूलक तिळिसुवुदेनेंदरे, सुरक्षित सालगारारिगे अडमान माडलाद/अधिकार नीडलाद ई केळगे विवरिसिद स्थिरास्तियन्नु सुरक्षित सालदातारद सेंट्रल् ब्यांक् आफ् इंडियाद अधिकृत अधिकारिगळु रचनात्मक/भौतिक स्वाधीनक्के तेगेदुकोंडिद्दु, स ऽासगि ऒप्पंदद प्रकार ब्यांक्‌गे सम्मतवागुव नियमगळ अनुसार 'एल्लिदेयो हागे' मत्तु 'स्वत्तुहेगिदेयो हागे' हागू 'एनिदेयो इद्द हागे' स्थितियल्लि ई आस्तिगळु ई केळगे निर्दिष्टपडिसिद दिनांक मत्तु समयदल्लि मारावाटक्के लभ्यविवे. ई आस्तिगळिगे मीसलु बेले मत्तु तेवणि माडबेकाद इएंडि मोत्तद विवरगळन्नु ई केळगे उल्लेखिसलागिदे.

क्र. सं.	शाखेय हेसरु मत्तु ऽाते / शाऽे: मंगळूरु	स्थिरास्तिय विवरगळु	डिमान्ड् नोटीस् दिनांक / बाकि मोत्त	मीसलु बेले: रू. / इएंडि हेच्चळ मौल्य	इ–हराजिन दिनांक मत्तु समय: / इएंडि सल्लिसलु कोनेय दिनांक हागू समय
1	श्री उदय कुमार बेट्टा, तंदे ईश्वर भट्, मने नं 2–22, बेळ्ळे बे